International Journal of Kannada Research
www.kannadajournal.com

ISSN: 2454–5813
IJKR 2023; 9(1): 06-09
© 2023 IJKR
www.kannadajournal.com
Received: 09-10-2022
Accepted: 13-11-2022

**ಡಾ. ಎಚ್. ಎಂ. ಮಹೇಶ್**
ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ
ವಿಭಾಗ ಐ.ಡಿ.ಎಸ್.ಜಿ. ಸರ್ಕಾರಿ
ಕಾಲೇಜು ಚಿಕ್ಕಮಗಳೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಎಚ್. ಎಂ. ಮಹೇಶ್**
ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ
ವಿಭಾಗ ಐ.ಡಿ.ಎಸ್.ಜಿ. ಸರ್ಕಾರಿ
ಕಾಲೇಜು ಚಿಕ್ಕಮಗಳೂರು,
ಕರ್ನಾಟಕ, ಭಾರತ

# ಆಧುನಿಕ ವಚನ ಸಾಹಿತ್ಯದ ಇಣುಕು ನೋಟ

**ಡಾ. ಎಚ್. ಎಂ. ಮಹೇಶ್**

**ಪೀಠಿಕೆ**

‘ವಚನ’ ಎನ್ನುವ ಪರಿಕಲ್ಪನೆ ಅತ್ಯಂತ ಪ್ರಾಚೀನವಾದದ್ದು. ಸುಮಾರು ಎಂಟುನೂರ ಐವತ್ತು ವರ್ಷಗಳ ಹಿಂದೆಯೇ ಕನ್ನಡ ಭಾಷೆ, ಸಾಹಿತ್ಯ ಮತ್ತು ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗೆ ‘ವಚನ’ ನಾಂದಿ ಹಾಡಿದೆ. ಜೀವನ ಸಿದ್ಧಾಂತವನ್ನು ಪ್ರತಿಪಾದಿಸುವ ವಚನ ಸಾಹಿತ್ಯ ಲೌಕಿಕ ಮತ್ತು ಪಾರಮಾರ್ಥಿಕಗಳನ್ನು ಬೆಸೆಯುವ ಅಮೃತವಾಣಿಯಾಗಿದೆ. ಕಾವ್ಯಧರ್ಮ ಮತ್ತು ಮಾನವ ಧರ್ಮಗಳ ತಿರುಳು ಸಮರಸಗೊಂಡಿರುವ ವಚನಗಳಿಗೆ ಸಾರ್ವಕಾಲಿಕ ಮೌಲ್ಯ ಪ್ರಾಪ್ತಿಯಾಗಿದೆ. ದಾಸಿಮಯ್ಯನ ಕಾಲಕ್ಕೆ ‘ಸೂಳ್ನುಡಿ’ಯಾಗಿ ಬೆಳೆದ ಈ ಸಾಹಿತ್ಯ ರೂಪ ಬಸವಾದಿ ಶರಣರ ಕಾಲಕ್ಕೆ ವಚನ ಪರಂಪರೆಯಾಗಿ ಜನಪ್ರಿಯತೆ ಪಡೆದಿದೆ. ಹನ್ನೆರಡನೆಯ ಶತಮಾನದ ನಂತರ ಗುಪ್ತಗಾಮಿನಿಯಾಗಿದ್ದ ಈ ವಚನ ವಾಹಿನಿ ಹದಿನಾರನೆಯ ಶತಮಾನದಲ್ಲಿ ತೋಂಟದ ಸಿದ್ದಲಿಂಗೇಶ್ವರರಿಂದಾಗಿ ಪುನರುಜ್ಜೀವನ ಪಡೆದಿದೆ. ಹದಿನೇಳನೆಯ ಶತಮಾನದಲ್ಲಿ ಬದುಕಿದ್ದ ಜೇವರಗಿಯ ಷಣ್ಮುಖ ಶಿವಯೋಗಿಗಳು ‘ಅಖಂಡೇಶ್ವರ’ ಅಂಕಿತದಲ್ಲಿ ವಚನ ಪರಂಪರೆಯನ್ನು ಮುನ್ನಡೆಸಿದ್ದಾರೆ. ಮುಂದೆ ಆಧುನಿಕ ಯುಗದಲ್ಲಿಯೂ ನೂರಾರು ಸಂಖ್ಯೆಯ ವಚನಕಾರರು ರಚಿಸಿರುವ ಸಹಸ್ರ ಸಹಸ್ರ ಸಂಖ್ಯೆಯ ವಚನಗಳು ತತ್ವ, ಧರ್ಮದಂತಹ ವಿಷಯಗಳ ಜೊತೆಗೆ ಲೌಕಿಕ ವಿಷಯಗಳ ಅಭಿವ್ಯಕ್ತಿಗೆ ಸಮರ್ಥ ವಾಹಕಗಳಾಗಿವೆ.

**ಆಧುನಿಕ ಯುಗ**

“ಪ್ರಾಚೀನ ವಚನಕಾರರು ಸಾಹಿತ್ಯ ರಚನೆಗೆಂದೆ ಹೊರಟವರಲ್ಲ, ಬಹುಶಃ ಆ ವಚನಕಾರರ ದೃಷ್ಟಿಯಲ್ಲಿ ಸಾಹಿತ್ಯಿಕ ಸಿದ್ದಿ ಕೇವಲ ಅನುಷಂಗಿಕವಾಗಿರಬೇಕು. ಇಂದಿನ ವಚನಕಾರರಿಗೆ ವಚನಗಳು ಸಾಹಿತ್ಯ ರೂಪವಾಗಿಯೇ ಉಳಿದಿವೆ. ಅದರಿಂದಾಗಿಯೇ ಸಣ್ಣಕತೆ, ಕಾದಂಬರಿ, ನಾಟಕ, ಪ್ರಬಂಧ, ಕವಿತೆಗಳಂತೆ ಇದೂ ಒಂದು ಸಾಹಿತ್ಯ ಪ್ರಕಾರವಾಗಿ ತೋರಿದೆ. ಪ್ರಾಚೀನ ವಚನಗಳ ಕಾಳಜಿಯೇ ಬೇರೆ, ಇಂದಿನ ವಚನಗಳ ಕಾಳಜಿಯೇ ಬೇರೆ.”[1] ಇಪ್ಪತ್ತನೆಯ ಶತಮಾನದಲ್ಲಿ ವಚನವೊಂದನ್ನೇ ತಮ್ಮ ಸೃಜನಶೀಲ ಮಾಧ್ಯಮವಾಗಿ ಮಾಡಿಕೊಂಡವರು ಎಸ್.ವಿ. ರಂಗಣ್ಣನವರು. “ಐತಿಹಾಸಿಕವಾಗಿ ಆಧುನಿಕ ವಚನಕಾರರಲ್ಲಿ ರಂಗಣ್ಣನವರು ಮೊದಲಿಗರಾಗಿರುವರು” ಎಂದು ಡಾ.ಹಾಮಾನಾ ಅಭಿಪ್ರಾಯ ಪಟ್ಟಿದ್ದಾರೆ.[2] “ಪ್ರಾಚೀನ ವಚನಗಳ ಪ್ರಭಾವದಿಂದ ಅಂಕಿತ ಸಹಿತ ವಚನ ಮಾಧ್ಯಮವನ್ನೇ ಪೂರ್ಣವಾಗಿ ಬಳಸಿಕೊಂಡ ಆಧುನಿಕ ವಚನಕಾರರಲ್ಲಿ ಸಮಾಜ ಸುಧಾರಕ ಹರ್ಡೇಕರ ಮಂಜಪ್ಪನವರು ಮೊದಲಿಗರು” ಎಂದು ಡಾ. ಸಂಗಮೇಶ ಹಂಡಿಗಿ ಅಭಿಪ್ರಾಯಪಟ್ಟಿದ್ದಾರೆ.[3] ಬೇಂದ್ರೆಯವರ ‘ಕರುಳಿನ ವಚನಗಳು’, ಕುವೆಂಪುರವರ ‘ಕಿಂಕಿಣಿ’, ಆನಂದರ ‘ಪಕ್ಷಿಗಾನ’ ಕೃತಿಗಳಲ್ಲಿ ಪ್ರಾಚೀನ ವಚನಕಾರರ ಪ್ರಭಾವವನ್ನು ಕಾಣಬಹುದು, ಆದರೆ ಈ ಮೂವರ ವಚನಗಳಲ್ಲಿ ಅಂಕಿತಗಳಿರುವುದಿಲ್ಲ. ಅಂಕಿತ ಸಹಿತ ವಚನ ಮಾಧ್ಯಮವನ್ನೇ ಪೂರ್ಣವಾಗಿ ಬಳಸಿಕೊಂಡವರಲ್ಲಿ ಹರ್ಡೇಕರ ಮಂಜಪ್ಪ, ಎಸ್.ವಿ ರಂಗಣ್ಣ, ಡಾ.ಜಚನಿ, ಶ್ರೀಮೂಜಗಂ, ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಮುರುಘರಾಜೇಂದ್ರ ಶರಣರು, ಶ್ರೀ ಪಂಡಿತ ಶಿವಾಚಾರ್ಯ ಸ್ವಾಮೀಜಿಗಳು, ಮಾತೆ ಮಹಾದೇವಿ, ಜೋಳದ ರಾಶಿ ದೊಡ್ಡನಗೌಡ, ಪುಟ್ಟರಾಜ ಗವಾಯಿಗಳು, ಎಸ್.ವಿ ಪರಮೇಶ್ವರಭಟ್ಟ, ಸಿದ್ದಯ್ಯ ಪುರಾಣಿಕ, ಡಿ.ಎಸ್.ಕರ್ಕಿ, ಸಿ.ಪಿ.ಕೆ, ಹೆಚ್. ತಿಪ್ಪೇರುದ್ರಸ್ವಾಮಿ, ದೊಡ್ಡರಂಗೇಗೌಡ, ಪಂಚಾಕ್ಷರಿ ಹಿರೇಮಠ, ರಂಗನಾಥ ದಿವಾಕರ, ಓಂಕಾರಮ್ಮ, ಸಿಂಪಿ ಲಿಂಗಣ್ಣ, ಗೊ.ರು. ಚನ್ನಬಸಪ್ಪ, ಕಮಲಾ ಹಂಪನಾ, ಸಂಗಮೇಶ ಹಂಡಿಗಿ, ಚಂದ್ರಯ್ಯನಾಯ್ಡು, ಕೆ. ಓಂಕಾರಪ್ಪ, ಗು. ಶಂಕರಮ್ಮ, ದಾಕ್ಷಾಯಿಣಿ

ಜಯದೇವಪ್ಪ, ಕುಂದೂರು ಅಶೋಕ ಮೊದಲಾದ ನೂರಾರು ಸಂಖ್ಯೆಯ ವಚನಕಾರರು ವಚನ ರಾಶಿಯನ್ನು ಬೆಟ್ಟದೆತ್ತರಕ್ಕೆ ಏರಿಸಿದ್ದಾರೆ. "ಹೆಸರು ಅದೇ ಆದರೂ ಉಸಿರು ಬೇರೆಂಬುದನ್ನು ಗಮನಿಸಬೇಕು. ಅಂದಿನಂತೆ ಇಂದು ವಚನಗಳು ಸಾಮೂಹಿಕ ಜನ ಜಾಗೃತಿಗೆ ಕಾರಣವಾದ ಧಾರ್ಮಿಕ ಕಿಡಿಗಳಾಗಿ ಬೆಳಗದೆ, ವೈಯಕ್ತಿಕ ಸಾಧನೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ಬೆಳೆದು ಬಂದಿವೆ. ಇದು ಆಧುನಿಕ ವಚನ ಸಾಹಿತ್ಯಕ್ಕೆಲ್ಲ ಅನ್ವಯಿಸುವ ಮಾತು"[4] ಎಂದು ಡಾ. ತಿಪ್ಪೇರುದ್ರ ಸ್ವಾಮಿ ತಮ್ಮ ಲೇಖನವೊಂದರಲ್ಲಿ ತಿಳಿಸಿರುತ್ತಾರೆ.

**ವಚನಗಳ ಸ್ವರೂಪ**

ವಚನ ಸಾಹಿತ್ಯವು ರೂಪ ಮತ್ತು ಸತ್ವಗಳ ದೃಷ್ಟಿಯಿಂದ ಅತ್ಯಂತ ಅಪೂರ್ವ ಸೃಷ್ಟಿಯಾಗಿದೆ. ವಚನಗಳು ಶಾಸ್ತ್ರ ಮತ್ತು ಸಾಹಿತ್ಯ ಎರಡೂ ಆಗಿವೆ. ಬಸವಣ್ಣ ತಮ್ಮ ವಚನವೊಂದರಲ್ಲಿ ಹೇಳಿರುವಂತೆ 'ಆನು ಒಲಿದಂತೆ ಹಾಡುವೆ' ಎಂಬ ಮಾತು ಬಹುಶಃ ಆಧುನಿಕ ವಚನಕಾರರಿಗೂ ಅನ್ವಯಿಸುವಂತೆ ಕಂಡು ಬರುತ್ತದೆ. ವಚನಗಳು ಅನೇಕ ವಿಶಿಷ್ಟಾಂಶಗಳಿಂದ ಕೂಡಿದ್ದು, ಹೊರನೋಟಕ್ಕೆ ಸುಲಭವಾಗಿ ಗುರುತಿಸಬಹುದಾದ ರಚನೆಗಳಾಗಿವೆ. ಈ ಹೊರನೋಟದ ಸಂಕ್ಷಿಪ್ತತೆ, ವಚನಗಳ ಕೊನೆಯಲ್ಲಿರುವ ಅಂಕಿತಗಳು, ನಿಯತ ಛಂದಸ್ಸಿಗೆ ಒಳಪಡದ ಸಾಲುಗಳು ಎದ್ದು ಕಾಣುವ ಪ್ರಮುಖ ಅಂಶಗಳಾಗಿವೆ. ವಚನಗಳಲ್ಲಿ ಪ್ರತಿಯೊಂದೂ ಸ್ವತಂತ್ರ ರಚನೆಗಳಾಗಿವೆ. ವಚನಕಾರರು ತನಗನ್ನಿಸಿದ ಭಾವನೆಯನ್ನು ಒಂದು ವಚನವಾಗಿ ರಚಿಸಿರುವುದರಿಂದ ಪ್ರತೀ ವಚನವು ಒಂದೊಂದು ಮುಕ್ತಕ. ಇಂತಹ ಮುಕ್ತಕ ರಚನೆಗಳು ಕನ್ನಡ ಸಾಹಿತ್ಯದಲ್ಲಿ ವಚನಗಳಿಗಿಂತ ಮೊದಲು ನಮಗೆ ತಿಳಿದಂತೆ ಇರಲಿಲ್ಲ. ವಚನಗಳು ಪದ್ಯಗಂಧಿಯಾದ ಗದ್ಯವಾಗಿರುವುದರಿಂದ ಕಟ್ಟುನಿಟ್ಟಿನ ಲೆಕ್ಕಾಚಾರದ ಬಂಧವಿಲ್ಲದಿದ್ದರೂ ಭಾವಕ್ಕೆ ಹೊಂದುವಂತಹ ಲಯ ಅವುಗಳಲ್ಲಿ ಕಂಡು ಬರುತ್ತವೆ. ಅಂತ್ಯಪ್ರಾಸ ಮತ್ತು ತರ್ಕಬದ್ಧ ರಚನಾ ಕ್ರಮದಿಂದ ವಚನಗಳು ಗಮನ ಸೆಳೆಯುತ್ತವೆ. ಹೇಳಬೇಕೆಂದಿರುವ ಭಾವವನ್ನು ಸಮರ್ಥವಾಗಿ, ಪರಿಣಾಮಕಾರಿಯಾಗಿ ಹೇಳಲು ಕನ್ನಡ ಭಾಷೆಯನ್ನು ವಚನಕಾರರು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ.

**ಅಂಕಿತಗಳು**

ವಚನಗಳ ಮತ್ತೊಂದು ವೈಶಿಷ್ಟ್ಯವೆಂದರೆ ಅಂಕಿತಗಳು. ಪ್ರತಿಯೊಬ್ಬರೂ ವಿಶಿಷ್ಟವಾದ ಅಂಕಿತದೊಡನೆ ವಚನಗಳನ್ನು ರಚಿಸಿದ್ದಾರೆ. ಮುಕ್ತಕದ ಕೊನೆಗೆ ಅಂಕಿತವನ್ನು ಹೇಳಿರುವುದರಿಂದ ಅದು ಯಾರ ರಚನೆಯೆಂದು ಸುಲಭವಾಗಿ ಗುರುತಿಸಬಹುದು. ಅಂಕಿತಗಳನ್ನಿಟ್ಟುಕೊಂಡು ಈ ಬಗೆಯ ರಚನೆಗಳನ್ನು ಮಾಡಿದವರಲ್ಲಿ ವಚನಕಾರರೇ ಮೊದಲಿಗರು. ವಚನಕಾರರು ಅಂಕಿತಗಳನ್ನು ಬಳಸುವಾಗ ಅನೇಕ ರೀತಿ-ನೀತಿಗಳನ್ನು ಅನುಸರಿಸಿದ್ದಾರೆ. ಬಹುಮಂದಿ ವಚನಕಾರರು ತಮ್ಮ ಆರಾಧ್ಯ ದೈವಗಳ ಹೆಸರನ್ನೇ ತಮ್ಮ ವಚನಗಳ ಅಂಕಿತವಾಗಿ ಬಳಸಿರುತ್ತಾರೆ. ಬಸವಣ್ಣ 'ಕೂಡಲ ಸಂಗಮದೇವ', ಪ್ರಭುದೇವ 'ಗುಹೇಶ್ವರ', ಮಹಾದೇವಿ ಅಕ್ಕ 'ಚನ್ನ ಮಲ್ಲಿಕಾರ್ಜುನ' ಹೀಗೆ ಪ್ರಾಚೀನ ಪರಂಪರೆಯ ವಚನಕಾರರು ಅಂಕಿತಗಳನ್ನು ಬಳಸಿರುವಂತೆ ಆಧುನಿಕ ವಚನಕಾರರೂ ಅಂಕಿತಗಳೊಂದಿಗೆ ವಚನ ರಚನೆ ಮಾಡಿದ್ದಾರೆ. ನೂರಾರು ಸಂಖ್ಯೆಯಲ್ಲಿರುವ ಆಧುನಿಕ ವಚನಕಾರರು ತಮ್ಮ ಇಷ್ಟದೈವ, ತಾವು ನಂಬಿದ ತತ್ವಾದರ್ಶ, ಕಾಣದ ಶಕ್ತಿಯನ್ನು ಅಂಕಿತವಾಗಿಸಿಕೊಂಡಿದ್ದಾರೆ.

ಎಸ್. ವಿ. ರಂಗಣ್ಣ 'ಮಾವಿನಕೆರೆ ರಂಗಯ್ಯ' , ಎಸ್. ವಿ. ಪರಮೇಶ್ವರ ಭಟ್ಟ 'ಸದಾಶಿವಗುರು', ಸಿದ್ದಯ್ಯ ಪುರಾಣಿಕ 'ಸ್ವತಂತ್ರಧೀರ ಸಿದ್ದೇಶ್ವರ', ಸಿ.ಪಿ.ಕೆ, 'ಕಾರಣಿಕ ಪ್ರಭು', ಡಿ.ಎಸ್. ಕರ್ಕಿ 'ಉಪಮಾತೀತ ಉಮಾಮಹೇಶ್ವರ', ಜೋಳದ ರಾಶಿ ದೊಡ್ಡನಗೌಡ 'ರಾಮೇಶ್ವರ', ಎಚ್. ತಿಪ್ಪೇರುದ್ರಸ್ವಾಮಿ 'ತಿಪ್ಪೇರುದ್ರ ಪ್ರಭು', ಮಹದೇವ ಬಣಕಾರ 'ಎನ್ನ ಗುರುಶಿವಕುಮಾರ ಪ್ರಭು', ಮಾತೆ ಮಹಾದೇವಿ 'ಸಚ್ಚಿದಾನಂದ', ಗು. ಶಂಕರಮ್ಮ 'ಕರಿಬಸವೇಶ್ವರ', ಹೆಚ್. ಜೆ. ಲಕ್ಕಪ್ಪಗೌಡ 'ಹಂಪಾಪುರಾಧೀಶ್ವರ', ಕಮಲ ಹಂಪನಾ 'ಕಮಲಾಪ್ರಿಯ', ಸಂಗಮೇಶ ಹಂಡಿಗಿ 'ಸಂಗಮೇಶ್ವರ ಪ್ರಿಯ ನಿಡುಮಾಮಿಡಿ ಚನ್ನಬಸವೇಶ್ವರ' ಚಂದ್ರಯ್ಯನಾಯ್ಡು 'ಸತ್ಯಪ್ರಿಯ' ಹೀಗೆ ಆಧುನಿಕ ವಚನಕಾರರೂ ಅಂಕಿತಕ್ಕೆ ಮಹತ್ವ ನೀಡಿದ್ದಾರೆ.

ಆಧುನಿಕ ವಚನಕಾರರಿಗೆ 'ವಚನಗಳು' ಸಾಹಿತ್ಯದ ಒಂದು ಪ್ರಕಾರವಾಗಿದ್ದು ಪ್ರಜ್ಞಾಪೂರ್ವಕವಾಗಿಯೇ ವಚನ ರಚನೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಸಮಾಜ ಜೀವಿಯಾದ ಕವಿ ಸಮಾಜದಲ್ಲಿ ನಡೆಯುವ ಪ್ರತಿಯೊಂದು ಸಂಗತಿಗೂ ಪ್ರತಿಕ್ರಿಯಿಸಿದ ರೀತಿಯೇ ವಚನಗಳಾಗಿವೆ. ಇವು ಸಮಕಾಲೀನ ಸಂಗತಿಗಳ ಮೇಲೆ ಬೆಳಕು ಚೆಲ್ಲಿ ಓದುಗರನ್ನು ಚಿಂತನೆಗೆ ತೊಡಗಿಸಲು ಸಹಾಯಕವಾಗಿವೆ. ವೈಚಾರಿಕತೆಯೊಂದಿಗೆ ಮಾನವೀಯತೆಯನ್ನು ಬಿಂಬಿಸುವುದು ಈ ವಚನಗಳ ವೈಶಿಷ್ಟ್ಯವಾಗಿದೆ. ಸಮಾಜ ಸುಧಾರಕ ರಾಷ್ಟ್ರೀಯವಾದಿ ಹರ್ಡೇಕರ ಮಂಜಪ್ಪ ಎಸ್.ವಿ. ರಂಗಣ್ಣನವರ ಸಮಕಾಲೀನರಾಗಿದ್ದವರು. 'ಜನಸೇವಕನ ವಚನಗಳು' ಶೀರ್ಷಿಕೆಯಡಿಯಲ್ಲಿ ಹರ್ಡೇಕರ ಮಂಜಪ್ಪನವರ ವಚನಗಳು ಪ್ರಕಟವಾಗಿವೆ. ಅಲ್ಲಮ ಪ್ರಭುವಿನ ಜೀವನ ಸಾಧನೆಯಿಂದ ಪ್ರಭಾವಿತರಾಗಿರುವ ಮಂಜಪ್ಪನವರು 'ಪ್ರಭುದೇವ' ಅಂಕಿತವಿರಿಸಿಕೊಂಡಂತಿದೆ. ಜನಸೇವೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿರಿಸಿದ್ದ ತಮ್ಮನ್ನು 'ಜನಸೇವಕ' ಎಂದು ಕರೆದುಕೊಂಡಿದ್ದಾರೆ. ಅವರ ವಚನದ ಮಾದರಿಯೊಂದು ಹೀಗಿದೆ.

> ಜನಹಿತಕ್ಕೆ ಧನ ವಂಚಿಸಿಕೊಂಡಡೆ ಅದು ತನಗೆ
> ದರಿದ್ರವಯ್ಯ । ಪರಸೇವೆಗೆ ಧನ ಸೂರೆಮಾಡಿದೊಡೆ ಅದು
> ತನಗೆ ಸಿರಿವಂತಿಕೆಯಯ್ಯ । ಗೋವು ಕ್ಷೀರವಿತ್ತಾಗಲೇ
> ಪೂಜೆಗೊಂಬುದು ನೋಡಾ । ಇದು ಕಾರಣ ಪ್ರಭುದೇವ
> ಜನ ಸೇವಕಂಗೆ ಧನವಿಲ್ಲದ ದಾನಿಯಾಗಿರಿಸಯ್ಯ.[5]

ಸಮಾಜ ಸೇವೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡ ಶರಣ ಜೀವಿ ಮಂಜಪ್ಪನವರು ತ್ಯಾಗದಿಂದ ಕೂಡಿದ ಸೇವಾ ಜೀವನದ ಮಹತ್ವವನಿಲ್ಲಿ ವ್ಯಕ್ತಪಡಿಸಿದ್ದಾರೆ. ಜೊತೆಗೆ ಕ್ಷೀರವಿತ್ತು ಪೂಜೆಗೊಳ್ಳುವ ಗೋವಿನ ದೃಷ್ಟಾಂತವನ್ನು ಕೊಟ್ಟು ತಾವು ಹೇಳುವ ವಿಚಾರವನ್ನು ಖಚಿತಪಡಿಸಿದ್ದಾರೆ.

ಆಧುನಿಕ ವಚನ ರಚನೆಗೆ ಮನಸೋತಿರುವ ಎಸ್. ವಿ. ರಂಗಣ್ಣನವರು ತಮಗಾದ ಪ್ರೇರಣೆಯನ್ನು ಈ ರೀತಿ ಹೇಳಿಕೊಂಡಿದ್ದಾರೆ. "ಕಂದ, ವೃತ್ತ, ಷಟ್ಪದಿಗಳನ್ನು ಆಲಿಸಿ ಹರ್ಷಗೊಂಡಿದ್ದೆ. ವಚನಗಳ ಅಪೂರ್ವ ರೀತಿಯನ್ನು, ವಿನೂತನ ಸೊಬಗನ್ನು ಬಗೆದು ಆನಂದ ಪರವಶನಾದೆ, ಮುಗ್ಧನಾದೆ. ಸುಲಭ ಸರಳ ಶಬ್ದಗಳ ಇಂಪು-ಸೊಂಪು ಶಬ್ದಗುಚ್ಛಗಳ ಹೊಂದಾಣಿಕೆ, ಅನ್ಯೋನ್ಯ ವಾಕ್ಯಗಳ ಲಯ, ಓಟ, ಬೀಸು ನನ್ನ ಚಿತ್ತವನ್ನು ಸೂರೆಗೊಂಡವು. ಪುನರುಕ್ತವಾಗುವ ಅಂಕಿತ, 'ಅಯ್ಯಾ' ಎಂಬ ಸಂಬೋಧನೆ ಪ್ರಾಸಾನುಪ್ರಾಸಗಳ ಕುಣಿತ, ಪ್ರಶ್ನೆಗಳ ಸುರಿಮಳೆ, ಉಪಮಾನಗಳ ಜಲಪಾತ ಒಟ್ಟಾಗಿ ನನ್ನನ್ನು ವಚನ ದಾಸನನ್ನಾಗಿ ಮಾಡಿದವು."[6] ಎಸ್. ವಿ. ರಂಗಣ್ಣನವರ 'ರಂಗಬಿನ್ನಪ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು ಆಧುನಿಕ ವಚನ ಸಾಹಿತ್ಯಕ್ಕೆ ಸಂದ ಗೌರವವಾಗಿದೆ. ಎಸ್. ವಿ. ರಂಗಣ್ಣನವರ ವಚನ ಶೈಲಿಯನ್ನು ಈ ವಚನದಲ್ಲಿ ಕಾಣಬಹುದು.

ದೇವಲೋಕ ಭರತಖಂಡ ಎರಡೂ ನನ್ನದಾದಲ್ಲಿ
ದೇವಲೋಕವ ಬಿಟ್ಟುಕೊಡುವೆ ದೇವತೆಗಳಿಗೆ
ನಾ ಬಾಳುವೆ ಭರತಖಂಡದಲ್ಲಿ
ಅಮರಾವತಿ, ಮೈಸೂರು ಎರಡೂ ನನ್ನದಾದಲ್ಲಿ
ಅಮರಾವತಿಯ ದಾನವೀಯುವೆ ದೇವೇಂದ್ರನಿಗೆ
ಬಾಳುವೆ ಮುದ್ದು ಮೈಸೂರಿನಲ್ಲಿ
ಎನ್ನಿಷ್ಟವನು ಆಗಗೊಳಿಸಯ್ಯ ಮಾವಿನಕೆರೆ ರಂಗಯ್ಯ[7]

ಎಸ್.ವಿ ರಂಗಣ್ಣನವರ ವಚನಗಳಲ್ಲಿ ಗದ್ಯದ ಕೈ ಮೇಲಾಗಿದೆ. ಪಾಂಡಿತ್ಯ ವಿಮರ್ಶೆ ಎದ್ದು ಕಾಣುತ್ತದೆ. ತಮ್ಮ ಅಪಾರ ವಿದ್ವತ್ತು ಮತ್ತು ಅಧ್ಯಯನಗಳನ್ನು ವಚನ ರಚನೆಗೆ ಬಳಸಿಕೊಂಡಿದ್ದಾರೆ.

'ಸದಾಶಿವ ಗುರು' ಅಂಕಿತದಿಂದ ವಚನಗಳನ್ನು ರಚಿಸಿ ಜನಪ್ರಿಯರಾಗಿದ್ದ ಎಸ್. ವಿ. ಪರಮೇಶ್ವರ ಭಟ್ಟರ ವಚನಗಳು ಭಾವನಾಂಶಗಳಿಂದ ಕೂಡಿವೆ. ಇವರ ವಚನಗಳಲ್ಲಿ ಜೀವನ ವಿಮರ್ಶೆ, ಆತ್ಮವಿಮರ್ಶೆ ಎರಡೂ ಇವೆ. ನಿತ್ಯ ಜೀವನದಲ್ಲಿ ಕಂಡುಂಡ ಅನುಭವಗಳನ್ನು ಕಲಾತ್ಮಕವಾಗಿ ಚಿತ್ರಿಸುವ ಕೌಶಲ್ಯ ಇವರದು.

ನೀನು ನಮಗೆ ಕಡಲನು ತೋರಿ ಇದರ ಮೇಲೆ ಹೋಗಬಲ್ಲಿರಾ ಎಂದೆ
ನಾವು ಹೋಗಿ ನಿನಗೆ ಬೆರಗು ತಂದೆವು ತಂದೆ
ನೀನು ಗಿರಿಯನು ತೋರಿ ಇದರ ಮೇಲೆ ಏರಬಲ್ಲಿರಾ ಎಂದೆ
ನಾವು ಏರಿ ನಿನಗೆ ಬೆರಗು ತಂದೆವು ತಂದೆ
ನೀನು ಬಾನು ತೋರಿ ಇದರ ಮೇಲೆ ಹಾರಬಲ್ಲಿರಾ ಎಂದೆ
ನಾವು ಹಾರಿ ನಿನಗೆ ಬೆರಗು ತಂದೆವು ತಂದೆ
ಆದರೆ. ನೀನು ನಮ್ಮೆಲ್ಲರ ಕಡೆ ಕೈ ತೋರಿ ನೀವೆಲ್ಲರು
ಒಂದೇ ಕುಟುಂಬದವರಂತೆ ಬಾಳಬಲ್ಲಿರಾ ಎಂದೆ
ನಾವು ಉತ್ತರಿಸಲಾರದೆ ತತ್ತರಿಸುತಿದ್ದೇವೆ ತಂದೆ ಸದಾಶಿವಗುರು.[8]

ಆಧುನಿಕ ವಚನಕಾರರ ಸಾಲಿನಲ್ಲಿ ಗಮನ ಸೆಳೆಯುವ ಮತ್ತೊಂದು ಹೆಸರು ಡಾ. ಸಿದ್ಧಯ್ಯ ಪುರಾಣಿಕ. ಆಧುನಿಕ ವಚನ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿರುವ ಇವರ ವಚನಗಳ ಮೂಲ ಆಶಯ ಮಾನವತೆಯ ಪ್ರತಿಪಾದನೆಯಾಗಿದೆ.

ಓದಿ ಬ್ರಾಹ್ಮಣನಾಗು ಕಾದು ಕ್ಷತ್ರಿಯನಾಗು
ಶೂದ್ರ, ವೈಶ್ಯನೇ ಆಗು, ದುಡಿದು ಗಳಿಸಿ
ಏನಾದರೂ ಆಗು, ನಿನ್ನೊಲವಿನಂತಾಗು
ಏನಾದರೂ ಸರಿಯೆ ಮೊದಲು ಮಾನವನಾಗು
. . . . . . . . . . . . ಸ್ವತಂತ್ರಧೀರ ಸಿದ್ಧೇಶ್ವರಾ.[9]

ಮಾನವ ಧರ್ಮದಲ್ಲಿ ಅಚಲ ವಿಶ್ವಾಸವಿರಿಸಿಕೊಂಡು, ಅದನ್ನೇ ಉಸಿರಾಡುತ್ತಿರುವ ಧೀಮಂತ ಚೇತನವೊಂದರ ಅಂತರಂಗದ ನುಡಿಗಳಾಗಿವೆ. ವೈಚಾರಿಕ ಪ್ರಜ್ಞೆಯಿಂದ ಕೂಡಿದ ಪುರಾಣಿಕರ ವಚನಗಳು ಕೇವಲ ಭಕ್ತಿಯ ಭಾವುಕತೆಯಲ್ಲಿ ಕರಗಿ ಹೋಗುವುದಿಲ್ಲ. ಹಾಗೆಯೇ ಯಾವುದೋ ಆದರ್ಶದ ಪರಿಸರದಲ್ಲಿ ತನ್ಮಯವಾಗಿ ಕಟುಸತ್ಯಗಳನ್ನು ಕಡೆಗಣಿಸುವುದಿಲ್ಲ. ಸಮಕಾಲೀನ ಸಮಾಜದ ಲೋಪದೋಷಗಳ ಮೇಲೆ ಬೆಳಕು ಬೀರಿರುವ ಇವರ ವಚನಗಳಲ್ಲಿ ವೈಚಾರಿಕ ಮತ್ತು ಸಾಮಾಜಿಕ ಪ್ರಜ್ಞೆ ದಟ್ಟವಾಗಿದೆ.

ಸಿದ್ಧಯ್ಯ ಪುರಾಣಿಕರಿಂದ ಪ್ರಭಾವಿತರಾಗಿ ೨೦೦೦ಕ್ಕೂ ಹೆಚ್ಚು ವಚನಗಳನ್ನು ರಚಿಸಿರುವ ಚಂದ್ರಯ್ಯನಾಯ್ಡು ಅವರು 'ವಚನ ಕವಿ' ಎಂದೇ ಪ್ರಸಿದ್ಧರಾದವರು. ಅವರು ತಮ್ಮ ಬದುಕಿನ ಯಾತ್ರೆಯಲ್ಲಿ ಕಂಡುಂಡ ಸಂಗತಿಗಳು, ಎದುರಿಸಿದ ಸವಾಲುಗಳು, ಸಂಕಷ್ಟಗಳು ವಚನಗಳಲ್ಲಿ ಅಭಿವ್ಯಕ್ತಗೊಂಡಿವೆ. ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಓದುಗರನ್ನು ಚಿಂತನೆಗೆ ತೊಡಗಿಸಲು ಇವರ ವಚನಗಳು ಸಹಾಯಕವಾಗಿವೆ. ಮಾನವ ಮರೆಯುತ್ತಿರುವ ಮಾನವೀಯತೆ, ಹೃದಯ ಸಂಪನ್ನತೆ ಮತ್ತು ವಿವೇಕವನ್ನು ಎಚ್ಚರಿಸುವ ಪ್ರಯತ್ನವನ್ನು ವಚನಗಳಲ್ಲಿ ಕಾಣಬಹುದು. ಇವರ ಬಹುಪಾಲು ವಚನಗಳಲ್ಲಿ ಮಾನವತಾವಾದದ ಪ್ರತಿಪಾದನೆಯಿದೆ. ಹಾಗೆಯೇ ವಿಡಂಬನೆ, ವ್ಯಂಗ್ಯ ವಿಷಾದ ಸ್ಥಾಯಿಯಾಗಿದೆ. ಜೀವನದ ಅನೇಕ ಘಟ್ಟಗಳಲ್ಲಿ, ಸಂದರ್ಭಗಳಲ್ಲಿ ಪ್ರಶ್ನೆಗಳು ಅನೇಕ ಮುಖವಾಗಿ ಉದ್ಭವಿಸಲು ಕಾರಣವಾದ ಸಮಸ್ಯೆಗಳಲ್ಲಿ ಕೆಲವಕ್ಕಷ್ಟೇ ಉತ್ತರ. ಉಳಿದವು ನಿಗೂಢ. ಇದು ಬದುಕಿನ ರೀತಿ ನೀತಿ ಎಂಬುದು ವಚನಗಳಲ್ಲಿ ನೇರವಾಗಿ, ಕೆಲವೊಮ್ಮೆ ಪರೋಕ್ಷವಾಗಿ ಧ್ವನಿತವಾಗುತ್ತದೆ.

ವಾದಿಸೋಣ ವಿಚಾರವಾದಿಗಳೊಡನೆ
ಚರ್ಚಿಸೋಣ, ಚಿಂತಕರೊಡನೆ
ಗುದ್ದಾಡೋಣ, ಜ್ಞಾನಿಗಳೊಡನೆ
ಸ್ನೇಹಮಾಡೋಣ, ಸಜ್ಜನರೊಂದಿಗೆ
ಪ್ರೇಮ ಬೆಳೆಸೋಣ, ಪುಸ್ತಕಗಳೊಡನೆ
ಹೋರಾಡೋಣ, ಮೌಢ್ಯದ ಮೂಲೋತ್ಪಾಟನೆಗೆ
ತಲೆಬಾಗೋಣ, ಮಹಾತ್ಮರಿಗೆ
ಸೇರೋಣ, ಮಾನವಕುಲಕ್ಕೆ-ಸತ್ಯಪ್ರಿಯ! [10]

ಇಲ್ಲಿಯ ವಚನಗಳಲ್ಲಿ ಬುದ್ಧಿ ಭಾವಗಳ ತಾಕಲಾಟವಿದೆ. ಪಕ್ವವಾದ ಮನಸ್ಸೊಂದು ಜನಸಾಮಾನ್ಯರೊಂದಿಗೆ ಮಾತನಾಡಿದಂತೆ ಇಲ್ಲಿನ ಬರವಣಿಗೆಯಿದೆ. ಸತ್ಯ, ಸಮಾನತೆ, ಪ್ರಾಮಾಣಿಕತೆ ಇಲ್ಲಿ ವ್ಯಕ್ತವಾಗುವ ಮೌಲ್ಯಗಳು. ಅಂತರಂಗ ಬಹಿರಂಗಗಳನ್ನು ನಿಷ್ಠುರವಾಗಿ ಶೋಧಿಸಿಕೊಳ್ಳುವ ಆತ್ಮವಿಮರ್ಶೆ ಇಲ್ಲಿದೆ. ನಡೆಗೂ ನುಡಿಗೂ ವ್ಯತ್ಯಾಸವಿರಬಾರದು, ಸತ್ಯಕ್ಕೆ ನಿಷ್ಠೆಗೆ ಪ್ರಾಮುಖ್ಯತೆ ಕೊಡಬೇಕು ಎಂಬ ಒತ್ತಾಸೆಯಿದೆ. ಸಮಾನತೆ ಎಂಬ ಮೌಲ್ಯ ಇಲ್ಲಿಯ ವಚನಗಳ ಪ್ರಧಾನ ಧಾರೆಯಾಗಿದ್ದು, ಪ್ರತಿ ವಚನದಲ್ಲೂ ಅದು ಅಂತರ್ಜಲದಂತೆ ಹರಿಯುತ್ತದೆ. ಗಂಡು , ಹೆಣ್ಣು, ವರ್ಗ, ವರ್ಣ, ಉಚ್ಚ ,ನೀಚ ಎಂಬ ಬೇಧಗಳು ಅಳಿಸಿ, ಆ ಜಾಗದಲ್ಲಿ ಸಮಾನತೆ, ಭ್ರಾತೃತ್ವ, ಪ್ರೀತಿ, ನೆಮ್ಮದಿ ಸಾಮರಸ್ಯ ನೆಲಸಬೇಕು ಎಂಬ ಆಶಯಗಳು ನಾಯ್ಡು ಅವರ ವಚನಗಳಲ್ಲಿವೆ.

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ಅಂತರ್ಯದಲ್ಲಿ ಅನುಭಾವ, ವೀರಶೈವ ಧರ್ಮ ತತ್ವಗಳು ತುಂಬಿಕೊಂಡಿದ್ದರೆ ೨೦ ಮತ್ತು ೨೧ ನೆಯ ಶತಮಾನದ ವಚನಗಳಲ್ಲಿ ಲೌಕಿಕ ಕಾರ್ಯಗಳ ಹಲವು ಸ್ತರಗಳಲ್ಲಿ ಕವಿ ತನ್ನನ್ನು ತೊಡಗಿಸಿಕೊಂಡ ಕ್ರಿಯಾಶೀಲ, ಚಿಂತನಶೀಲತೆಯ ಅಭಿವ್ಯಕ್ತಿಯನ್ನು ಕಾಣುತ್ತೇವೆ.

"ಗದ್ಯ ಗೀತೆಗಳ ಈ ಆಧುನಿಕ ಸಾಹಿತ್ಯ ಪ್ರಕಾರವನ್ನು ವಚನ ಪ್ರಕಾರವೆಂದು ಗುರುತಿಸಲು, ಅವುಗಳ ಲೇಖಕರನ್ನು 'ವಚನಕಾರ'ರೆಂದು ಕರೆಯಲು ಕೆಲವರಿಗೆ ಇಷ್ಟವಿಲ್ಲ. ಈ ಮಾತುಗಳನ್ನು ಅವುಗಳ ಮೂಲ ಸಂದರ್ಭಕ್ಕೆ ಮೀಸಲಿಡಬೇಕೆಂಬುದು ಅಂಥವರ ಅಭಿಪ್ರಾಯ. ಆದರೆ ವಚನ, ವಚನಕಾರ ಎಂಬ ಮಾತುಗಳನ್ನು ರಚನೆಯ ತಾಂತ್ರಿಕ ಸ್ವರೂಪಕ್ಕೆ ಸಂಬಂಧಿಸಿದ ಅರ್ಥದಲ್ಲಿ ಮಾತ್ರ ಬಳಸಲಾಗುತ್ತಿದೆಯೇ ಹೊರತು, ಹನ್ನೆರಡನೆಯ ಶತಮಾನದ ಶರಣ ಪರಂಪರೆಯ ಮುಂದುವರಿಕೆ ಎಂಬ ಅರ್ಥದಲ್ಲಿ ಅಲ್ಲ ಎಂಬುದನ್ನು ನಾವು ನೆನಪಿಡಬೇಕು."[11] ಒಂದು ಕಾಲದ ಸಾಹಿತ್ಯ ಇನ್ನೊಂದು ಕಾಲದಲ್ಲಿ ಮೂಲ ಧ್ಯೇಯ-ಧೋರಣೆಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು

ಪುನರಾವರ್ತನೆಗೊಳ್ಳುವುದಿಲ್ಲ ಎಂಬುದು ಸ್ಪಷ್ಟ. ಎಸ್.ವಿ ರಂಗಣ್ಣ ಶ್ರೀಜಚನಿ, ಎಸ್.ವಿ ಪರಮೇಶ್ವರ ಭಟ್ಟ ಮೊದಲಾದವರ ರಚನೆಗಳು ಹನ್ನೆರಡನೆಯ ಶತಮಾನದ ರಚನೆಗೆ ಹತ್ತಿರವಾದವುಗಳಾಗಿವೆ.

**ಅಡಿ ಟಿಪ್ಪಣಿಗಳು**

1. ಜಿ.ಎಸ್. ಸಿದ್ಧಲಿಂಗಯ್ಯ, ವಚನ ಸಾಹಿತ್ಯ ಒಂದು ಇಣುಕು ನೋಟ, ಪು.ಸಂ-೧೧೯ (೧೯೮೯)
2. ಡಾ. ಹಾಮಾನಾ, ಮುನ್ನುಡಿ, ಉಪ್ಪು ಕಡಲು, ಎಸ್.ವಿ. ಪರಮೇಶ್ವರ ಭಟ್ಟ, ಪು.ಸಂ-೧೧೧ (೧೯೭೦)
3. ಡಾ. ಸಂಗಮೇಶ ಹಂಡಿಗಿ, ಶ್ರೀಜಚನಿ ವಚನ ಸಾಹಿತ್ಯ-ಒಂದು ಅಧ್ಯಯನ, ಪು.ಸಂ-೬೭ (೧೯೯೫)
4. ಡಾ.ಎಚ್. ತಿಪ್ಪೇರುದ್ರಸ್ವಾಮಿ, ಮುನ್ನುಡಿ, ನಂದನವನ-ಸಿದ್ಧಯ್ಯ ಪುರಾಣಿಕ, ಪು.ಸಂ-VIII (೨೦೦೦)
5. ಹರ್ಡೇಕರ ಮಂಜಪ್ಪ, ಜನ ಸೇವಕನ ವಚನಗಳು, ಪು.ಸಂ-೧೦ (೧೯೩೨)
6. ಎಸ್. ವಿ. ರಂಗಣ್ಣ, ರಂಗ ಬಿನ್ನಪ, ಪು.ಸಂ-IV (೧೯೮೩)
7. ಅದೇ, ಪು.ಸಂ-೧೫೭
8. ಎಸ್.ವಿ. ಪರಮೇಶ್ವರ ಭಟ್ಟ, ಉಪ್ಪುಕಡಲು, ಪು.ಸಂ-೬೫ (೧೯೭೦)
9. ಡಾ. ಸಿದ್ಧಯ್ಯ ಪುರಾಣಿಕ, ವಚನೋದ್ಯಾನ, ಪು.ಸಂ-೩೦ (೧೯೯೨)
10. ಚಂದ್ರಯ್ಯನಾಯ್ಡು, ವಚನವೀಚಿ, ಪು.ಸಂ-೪೯ (೧೯೯೧)
11. *ಹಾಮಾನಾ, ಮುನ್ನುಡಿ. ವಚನೋದ್ಯಾನ-ಸಿದ್ಧಯ್ಯ ಪುರಾಣಿಕ, ಪು.ಸಂ-* VIII(೨೦೦೦)